ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

GULBARGA UNIVERSITY Jnana Ganga, KALABURAGI-585 106

☎Phone: 08472-263202, Fax: 08472-263206, E-mail:registrargug@rediffmail.com

ವಿದ್ಯಾಮಂಡಲ ವಿಭಾಗ

ಕ್ರ.ಸಂ.ಗುವಿಕ/ವಿಮವಿ/ಸಂಲಗ್ನತೆ/2026–27/ 291 ದಿನಾಂಕ: 29-10-2026

ಅಧಿಸೂಚನೆ

ವಿಷಯ: 2027–28ನೇ ಶೈಕ್ಷಣಿಕ ವರ್ಷಕ್ಕಾಗಿ ಹೊಸ ಕಾಲೇಜು, ಸ್ನಾತಕ ಹಾಗೂ ಸ್ನಾತಕೋತ್ತರ ಹೊಸ ಕೋರ್ಸು, ಹೊಸ ಶಾಶ್ವತ ಸಂಲಗ್ನತೆ ಹಾಗೂ ಸಂಲಗ್ನತೆ ಹೊಂದಿದ ಹಾಲಿ ಕಾಲೇಜುಗಳ ಮುಂದುವರಿಕೆ/ವಿಸ್ತರಣೆ/ಶಾಶ್ವತ ಸಂಲಗ್ನತೆ ನವೀಕರಣ/ ಹೊಸ ವಿಷಯ/ ಪ್ರವೇಶ ಸಂಖ್ಯೆ ಹೆಚ್ಚಳ ಮಂಜೂರಾತಿಗಾಗಿ (Unified University & College Management System) UUCMS ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ಪ್ರಸ್ತಾವನೆ ಸಲ್ಲಿಸುವ ಕುರಿತು.

ಉಲ್ಲೇಖ: 1. ಸರಕಾರದ ಆದೇಶ ಸಂಖ್ಯೆ: **ಇಡಿ/212/ಯುಎನ್‌ಇ/2024**, ಬೆಂಗಳೂರು, ದಿನಾಂಕ: 23.10.2025.

2. ಭಾರತ ಸರಕಾರದ **ಜಿ.ಎಸ್.ಟಿ. ಪತ್ರ ಸಂಖ್ಯೆ: File No.**GEXCOM/AE/INV/GST/6308/2023-AE, Date: 12.02.2024.

3. ಸರಕಾರದ ಆದೇಶ ಸಂಖ್ಯೆ: ಇಡಿ/212/ಯುಎನ್‌ಇ/2024, (Part-1) ಬೆಂಗಳೂರು, ದಿನಾಂಕ: 06.10.2026.

4,. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 23.10.2026

*****

ಗುಲಬರ್ಗಾ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ **ಗುಲಬರ್ಗಾ** ಜಿಲ್ಲಾ ವ್ಯಾಪ್ತಿಗೆ ಒಳಪಟ್ಟಿರುವ ಎಲ್ಲಾ ಸಂಲಗ್ನತೆ ಹೊಂದಿದ ಮಹಾವಿದ್ಯಾಲಯಗಳ ಪ್ರಾಂಶುಪಾಲರ **ಹಾಗೂ ಸಂಘ/ಸಂಸ್ಥೆಗಳ ಗಮನಕ್ಕೆ** ಈ ಮೂಲಕ ತರಬಯಸುವುದೇನೆಂದರೆ, 2027–28ನೇ ಶೈಕ್ಷಣಿಕ ವರ್ಷಕ್ಕಾಗಿ ಹೊಸ ಕಾಲೇಜು, **ಸ್ನಾತಕ ಹಾಗೂ ಸ್ನಾತಕೋತ್ತರ ಹೊಸ** ಕೋರ್ಸು, ಹೊಸ ಶಾಶ್ವತ ಸಂಲಗ್ನತೆ ಹಾಗೂ ಸಂಲಗ್ನತೆ ಹೊಂದಿದ ಹಾಲಿ ಕಾಲೇಜುಗಳ **ಮುಂದುವರಿಕೆ/ವಿಸ್ತರಣೆ/ಶಾಶ್ವತ ಸಂಲಗ್ನತೆ** ನವೀಕರಣ/ಹೊಸ ವಿಷಯ/ ಪ್ರವೇಶ ಸಂಖ್ಯೆ ಹೆಚ್ಚಳ, ಕಾಲೇಜಿನ ಹೆಸರು ಬದಲಾವಣೆ, **ಸ್ಥಳ ಬದಲಾವಣೆ ಹಾಗೂ ಆಡಳಿತ** ಮಂಡಿಳಿ ಬದಲಾವಣೆ ಮಂಜೂರಾತಿಗಾಗಿ (UUCMS) ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ **ಪ್ರಸ್ತಾವನೆ ಸಲ್ಲಿಸುವ ಕುರಿತು. (ಕಲಬುರಗಿ ಜಿಲ್ಲೆಯ** ಬಿ.ಎಡ್. ಬಿ.ಪಿ.ಎಡ್ ಹಾಗೂ ಎಂ.ಎಡ್ ಕೋರ್ಸುಗಳಿಗೆ ಕೇವಲ ಮುಂದುವರಿಕೆ **ಮಾತ್ರ). ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 59 (3) ರ ಮೇರೆಗೆ ಕೆಳಗೆ ನಮೂದಿಸಿದ ಕೋರ್ಸುಗಳಿಗೆ UUCMS ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು** ಕರೆಯಲಾಗಿದೆ.

ಸ್ನಾತಕ ಕೋರ್ಸುಗಳು:

ಅ. ಕಲಾ, ವಿಜ್ಞಾನ, ವಾಣಿಜ್ಯ, **ದೃಶ್ಯಕಲೆ**

ಬ. ಬಿ.ಬಿ.ಎಂ., ಬಿ.ಸಿ.ಎ., **ಬಿ.ಎಸ್.ಡಬ್ಲೂ.**

ಕ. ಬಿ.ಎಡ್, ಬಿ.ಪಿ.ಎಡ್

ಎ. ಐಟಿಇಪಿ (**Integrated Education Programm B.A, B.Ed** and B.Sc, B.Ed)

*** ವಿಷೇಶ ಸೂಚನೆ: NCTE ಯಿಂದ ಅನುಮತಿ ಪಡೆದ ನೂತನ್ ಶಿಕ್ಷಣ ಮಹಾವಿದ್ಯಾಲಯ ಮಾತ್ರ ಐಟಿಇಪಿ ಅರ್ಜಿ ಸಲ್ಲಿಸಲು ಅವಕಾಶ ವಿರುತ್ತದೆ.**

ಸ್ನಾತಕೋತ್ತರ ಕೋರ್ಸುಗಳು:

ಅ. ಎಂ.ಎ ಕನ್ನಡ/ಇಂಗ್ಲೀಷ/ಹಿಂದಿ/ಉರ್ದು/ಸಂಸ್ಕೃತ/ಮರಾಠಿ/ಫೈನ್‌ಆರ್ಟ್/ ಎಂ.ವಿ.ಎ. (ದೃಶ್ಯಕಲೆ/ಎಂ.ಎ.ಮ್ಯೂಜಿಕ (ಸಂಗೀತ ಕಲೆ)).

ಬ. ಎಂ.ಎ. ಸಮಾಜಶಾಸ್ತ್ರ/ **ಅರ್ಥಶಾಸ್ತ್ರ/ರಾಜ್ಯಶಾಸ್ತ್ರ/ಇತಿಹಾಸ/ಎಂ.ಎಸ.ಡಬ್ಲೂ**/ವುಮನ್ಸ ಸ್ಟಡೀಜ/ಮನೋವಿಜ್ಞಾನ/ಲೈಬ್ರರಿ ಆ್ಯಂಡ ಇನ್‌ಫಾರಮೇಶನ್ **ಸೈನ್ಸ/ಎಂ.ಜೆ.ಎಂ.ಸಿ. (Master of journalism** & mass Communication).

ಕ. ಎಂ.ಎಸ್ಸಿ. ರಸಾಯನಶಾಸ್ತ್ರ/ **ಸೂಕ್ಷ್ಮ ಜೀವಶಾಸ್ತ್ರ/ ಭೌತಶಾಸ್ತ್ರ/ ಅಪ್ಲೈಡ್** ಎಲೆಕ್ಟ್ರಾನಿಕ್ಸ/ ಬಯೋಕೆಮಿಸ್ಟ್ರಿ/ ಬಯೋಟೆಕ್ನಾಲೋಜಿ/ **ಸಸ್ಯಶಾಸ್ತ್ರ/ ಗಣಿತಶಾಸ್ತ್ರ/ ಸಂಖ್ಯಾಶಾಸ್ತ್ರ/ ಪ್ರಾಣಿಶಾಸ್ತ್ರ**/ ಗಣಕವಿಜ್ಞಾನ/ ಪರಿಸರ ವಿಜ್ಞಾನ.

ಡ. ಎಂ.ಕಾಂ (**ವಾಣಿಜ್ಯಶಾಸ್ತ್ರ**)

ಇ. ಎಂ. ಎಡ್ (ಮುಂದುವರಿಕೆ ಮಾತ್ರ).

ಸ್ನಾತಕೋತ್ತರ ಡಿಪ್ಲೋಮಾ ಕೋರ್ಸುಗಳು:

ಟ್ಯಾಕ್ಸ್ ಮ್ಯಾನೆಜಮೆಂಟ್, ಹ್ಯೂಮನ ರಿಸೋರ್ಸ ಮ್ಯಾನೇಜಮೆಂಟ್, ಕಂಪ್ಯೂಟರ ಅಪ್ಲಿಕೇಷನ್, ಪಂಚಾಯತ್ ರಾಜ್ ಆ್ಯಂಡ ರೂರಲ್ ಡೆವಲಪಮೆಂಟ, ಜರ್ನಲಿಜಂ ಅಂಡ ಮಾಸ್ ಕಮ್ಯುನಿಕೇಶನ್, ಟ್ರಾನ್ಸಲೇಶನ ಸ್ಕಿಲ್, ವಚನ ಸಾಹಿತ್ಯ, ನಾಟಕ ಸಾಹಿತ್ಯ ಮತ್ತು ರಂಗಭೂಮಿ, ಅಂಬೇಡ್ಕರ ಸ್ಟಡಿಜ್, ಹಾಸ್ಪಿಟಲ್ ಮ್ಯಾನೇಜಮೆಂಟ, ಯೋಗಾ.

ಉಲ್ಲೇಖ (1)ರ ಸರಕಾರದ ನಿರ್ದೇಶನದಂತೆ ಸಂಲಗ್ನತೆ ಪ್ರಕ್ರಿಯೆಯನ್ನು **ಆನ್‌ಲೈನ್**‌ನಲ್ಲಿ ಮಾತ್ರ ದಾಖಲಿಸಿ ಸಲ್ಲಿಸಬಹುದಾಗಿದ್ದು, ಯಾವುದೇ ರೀತಿ ಮ್ಯಾನವಲ್ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. **ಆನ್‌ಲೈನ್**‌ನಲ್ಲಿ ಸಂಲಗ್ನತೆ ಪ್ರಸ್ತಾವನೆ ಸಲ್ಲಿಸಲು ಉನ್ನತ ಶಿಕ್ಷಣ ಇಲಾಖೆಯ UUCMS ತಂತ್ರಾಂಶ ಸಂಪರ್ಕಿಸಬಹುದು.

ಉಲ್ಲೇಖ (2)ರ ಸರಕಾರದ ಮಾರ್ಗಸೂಚಿಯಂತೆ ಸಂಬಂಧಿಸಿದ ಮಹಾವಿದ್ಯಾಲಯಗಳು ಸಂಲಗ್ನತೆ ಶುಲ್ಕದ ಮೇಲೆ GST 18% ಭರಿಸತಕ್ಕದ್ದು.

ಸರಕಾರದ ಮಾರ್ಗಸೂಚಿಯಂತೆ ಸಂಬಂಧಿಸಿದ ಮಹಾವಿದ್ಯಾಲಯಗಳು ನಿಗದಿತ Affiliation Scores ಪಡೆಯಲು (The College should be complied with all defined parameters.) **ಈ ಕಂಡಿಕೆಯನ್ನು ಕಡ್ಡಾಯವಾಗಿ ಭರ್ತಿಮಾಡಿ ವಿವರಗಳನ್ನು** ತುಂಬುವುದು. ಸರ್ಕಾರದ ಆನ್‌ಲೈನ್ ಸಂಲಗ್ನತೆಯ **Defined Parameters ಪ್ರಕಾರ** ಕಾಲೇಜು ಹೊಂದಿರುವ ಮೂಲಭೂತ ಸೌಕರ್ಯಗಳಾದ, ತರಗತಿ ಕೋಣೆ, ಪ್ರಯೋಗಾಲಯ, ಗ್ರಂಥಾಲಯ, ಸಂಪನ್ಮೂಲಗಳು ಹಾಗೂ ಬೋಧಕರ ಸಂಖ್ಯೆ ಮತ್ತು ಗುಣಮಟ್ಟ, ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಸೌಲಭ್ಯಗಳು, ಅಲ್ಲದೇ ವಿದ್ಯಾರ್ಥಿಗಳ **ಫಲಿತಾಂಶ** ಹಾಗೂ ಪ್ಲೇಸ್‌ಮೆಂಟ್ ಸೇರಿದಂತೆ ಸ್ಥಳೀಯ ವಿಚಾರಣಾ ಸಮಿತಿಯು ಮಾಡುವ ಮೌಲ್ಯಮಾಪನದ ಆಧಾರದ **ಮೇಲೆ ಚಾಲ್ತಿಯಲ್ಲಿರುವ** ಕಾಲೇಜುಗಳು ಸಂಲಗ್ನತೆಯಲ್ಲಿ ಈ ಕೆಳಕಾಣಿಸಿದಂತೆ ಸಂಲಗ್ನತೆ ಸ್ಕೋರ ಹೊಂದಿದಲ್ಲಿ **ಮಾತ್ರ ಮಂಜೂರಾತಿ ನೀಡಲಾಗುವುದು.**

1.	ಹೊಸ ಸಂಯೋಜನೆಗಾಗಿ	–	ಪ್ರತಿಶತ 40
2.	ಸಂಯೋಜನೆ ನವೀಕರಣ/ಮುಂದುವರಿಕೆ ವಿಸ್ತರಣೆಗಾಗಿ	–	ಪ್ರತಿಶತ 45
3.	ವಿದ್ಯಾರ್ಥಿ ಪ್ರಮಾಣ **ಹೆಚ್ಚಳ ಮಂಜೂರಾತಿಗಾಗಿ**	–	ಪ್ರತಿಶತ 50
4.	ಹೊಸ ಕೋರ್ಸು ಮಂಜೂರಾತಿಗಾಗಿ/ಹೊಸ ವಿಷಯ/ COREDISCIPLENE **ಮಂಜೂರಾತಿಗಾಗಿ**	–	ಪ್ರತಿಶತ 55
5.	ಹೊಸ ಶಾಶ್ವತ ಸಂಲಗ್ನತೆ **ಮಂಜೂರಾತಿಗಾಗಿ**	–	ಪ್ರತಿಶತ 60
6.	ಶಾಶ್ವತ ಸಂಲಗ್ನತೆ ನವೀಕರಣ **ಮಂಜೂರಾತಿಗಾಗಿ**	–	ಪ್ರತಿಶತ 70

ಆನ್‌ಲೈನ್ ಅರ್ಜಿ ಸಲ್ಲಿಸುವ ಅವಧಿ 30.10.2026 ರಿಂದ 20.11.2026 ರವರೆಗೆ.

ಆನ್‌ಲೈನ್‌ನಲ್ಲಿ ಭರ್ತಿ ಮಾಡಿದ ಅರ್ಜಿಯ ಮುದ್ರಿತ ಪ್ರತಿಗಳನ್ನು ಅರ್ಜಿ ಸಂಸ್ಕರಣಾ ಶುಲ್ಕ, ಸಂಲಗ್ನತೆ ಶುಲ್ಕ ಹಾಗೂ ಅಗತ್ಯ ಸ್ಕ್ಯಾನ್ ಮಾಡಿದ ದಾಖಲೆಗಳೊಂದಿಗೆ 02 ಪ್ರತಿಗಳನ್ನು ವಿಶ್ವವಿದ್ಯಾಲಯಕ್ಕೆ **ಈ ಕೆಳಗೆ** ನಮೂದಿಸಿದ ದಿನಾಂಕದಂದು ಅಥವಾ ಅದಕ್ಕಿಂತ ಮುಂಚಿತವಾಗಿ ಕುಲಸಚಿವರು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಇವರ ಕಚೇರಿಯಲ್ಲಿ ಮಾತ್ರ ಸಲ್ಲಿಸಿ, ಸ್ವೀಕೃತಿ ಪತ್ರವನ್ನು ಪಡೆಯಲು ತಿಳಿಸಲಾಗಿದೆ. ಕುಲಸಚಿವರ ಕಚೇರಿಯಲ್ಲಿ ಸಲ್ಲಿಸದ ಅರ್ಜಿಗಳನ್ನು ಪರಿಗಣಿಸದೇ, ತಿರಸ್ಕರಿಸಲಾಗುವುದು. **ಸಂಲಗ್ನತೆ ಶುಲ್ಕವನ್ನು ಕೇವಲ UUCMS ಮುಖಾಂತರ ಮಾತ್ರ ಸಲ್ಲಿಸುವಂತೆ ಸೂಚಿಸಲಾಗಿದೆ, NEFT, RTGS ಹಾಗೂ ಇತರೆ ವಿಧಾನಗಳಿಂದ ಶುಲ್ಕವನ್ನು ಪಾವತಿ ಮಾಡತಕ್ಕದ್ದಲ್ಲ. ಆನ್‌ಲೈನ್‌ಲ್ಲಿ ಪಾವತಿಸದ ಶುಲ್ಕವನ್ನು ಪರಿಗಣಿಸಲಾಗುವುದಿಲ್ಲ.**

ಹೊಸ ಮಹಾವಿದ್ಯಾಲಯಕ್ಕಾಗಿ **ಆನ್‌ಲೈನ್**‌ನಲ್ಲಿ **New College (N.C),** ಮುಂದುವರಿಕೆ ಸಂಲಗ್ನತೆಗಾಗಿ Extension of Temporary Affiliation (ETA) **ಆಯ್ಕೆ ಮಾಡಿಕೊಳ್ಳುವುದು, Continuation of** Temporary Affiliation (CTA) ಆಯ್ಕೆಯನ್ನು ಮಾಡಿಕೊಳ್ಳುವುದು. ಅದೇ ರೀತಿ **ಶಾಶ್ವತ ಸಂಲಗ್ನತೆ ನವೀಕರಣಕ್ಕಾಗಿ Renewal** of Permanent Affiliation (RPA) ಆಯ್ಕೆ ಮಾಡಿಕೊಳ್ಳುವುದು,

ಆನ್‌ಲೈನ್ ಅರ್ಜಿ ಸಂಸ್ಕರಣಾ ಶುಲ್ಕ ಪ್ರತಿ ಕೋರ್ಸಿಗೆ (Online Application processing Fees each course) ರೂ 4000/–

1. ದಂಡ ರಹಿತ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 18.11.2026
2. ರೂ **2400/–** ಪ್ರತಿ ದಿನ ದಂಡದೊಂದಿಗೆ ಅರ್ಜಿ ಸಲಿಸುವ ಕೊನೆಯ ದಿನಾಂಕ: 19.11.2026 ರಿಂದ 20.11.2026
3. ದಿನಾಂಕ: 20.11.2026 ಈ ದಿನಾಂಕದ ನಂತರ ಆನ್‌ಲೈನ್ ಅರ್ಜಿಸಲ್ಲಿಸಲು ಅವಕಾಶವಿರುವುದಿಲ್ಲ.
4. ವಿಶ್ವವಿದ್ಯಾಲಯಕ್ಕೆ ಅರ್ಜಿ (Manual) ಸಲ್ಲಿಸುವ ಕೊನೆಯ ದಿನಾಂಕ: 23.11.2026

ಹೊಸ ಮಹಾವಿದ್ಯಾಲಯದ ಪ್ರಸ್ತಾವನೆ ಸಲ್ಲಿಸುತ್ತಿರುವ ಸಂಸ್ಥೆಗಳು ಸರ್ಕಾರದ ನಿಯಮಾವಳಿಯಂತೆ ಗುಲಬರ್ಗಾ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಪ್ರದೇಶದಲ್ಲಿ ಕನಿಷ್ಠ ಒಂದು ಎಕರೆ ಕಾರ್ಪೋರೇಶನ್ ಪ್ರದೇಶ, ಎರಡು ಎಕರೆ ಇತರ ನಗರ, ಮತ್ತು ತಾಲೂಕುಗಳಲ್ಲಿ ಹಾಗೂ 5 ಎಕರೆ ಇತರ ಸ್ಥಳಗಳಲ್ಲಿ ವಿವಾದ ರಹಿತ ಜಮೀನು ಹೊಂದಿರಬೇಕು.

ಹೆಚ್ಚಿನ ಮಾಹಿತಿಯನ್ನು ವಿಶ್ವವಿದ್ಯಾಲಯದ ವಿದ್ಯಾಮಂಡಲ ವಿಭಾಗದಿಂದ ಪಡೆಯಬಹುದು ಹಾಗೂ ವಿಶ್ವವಿದ್ಯಾಲಯದ ವೆಬ್‌ಸೈಟ್ www.gug.ac.in ನಿಂದ ಪಡೆಯಬಹುದು.

ಮುಖ್ಯಸೂಚನೆ

ಹಿಂದಿನ ಶೈಕ್ಷಣಿಕ ವರ್ಷಗಳ ಸಂಯೋಜನೆ ಶುಲ್ಕ, ಜಿಎಸ್‌ಟಿ (GST) ಶುಲ್ಕ ಹಾಗೂ ಅರ್ಜಿ ಶುಲ್ಕಗಳನ್ನು ಬಾಕಿ ಉಳಿಸಿಕೊಂಡಿರುವ ಮಹಾವಿದ್ಯಾಲಯಗಳಿಗೆ 2027–28ನೇ ಶೈಕ್ಷಣಿಕ ವರ್ಷದ ಸಂಯೋಜನೆ ಅಧಿಸೂಚನೆಯನ್ನು ತಡೆಹಿಡಿಯಲಾಗುವುದು.

ಆದ್ದರಿಂದ, ಸಂಬಂಧಪಟ್ಟ ಎಲ್ಲಾ ಮಹಾವಿದ್ಯಾಲಯಗಳು ತಮ್ಮ ಬಾಕಿ ಶುಲ್ಕಗಳನ್ನು ಕೂಡಲೇ ಪಾವತಿಸಿ, ಮುಂದಿನ ಶೈಕ್ಷಣಿಕ ವರ್ಷದ ಸಂಯೋಜನೆ ಪ್ರಕ್ರಿಯೆಗೆ ಯಾವುದೇ ಅಡಚಣೆ ಉಂಟಾಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು.

ವಿಶೇಷ ಸೂಚನೆ

ಆನ್‌ಲೈನ್ ಸಂಲಗ್ನತೆ ಪ್ರಕ್ರಿಯೆಯ ಕುರಿತು ಸರ್ಕಾರದ ಮಾರ್ಗಸೂಚಿ ನಿಯಮಗಳಲ್ಲಿ ವಿಧಿಸಲಾಗಿರುವ ಶರತ್ತುಗಳಂತೆ

1. ಯಾವುದೇ ಸಂಘ/ಸಂಸ್ಥೆಗಳು **ಹೊಸ ಮಹಾವಿದ್ಯಾಲಯಕ್ಕೆ** ಪ್ರಸ್ತಾವನೆ ಸಲ್ಲಿಸುವಾಗ ಕಾಲೇಜಿನ ಹೆಸರಿನಲ್ಲಿ National / Indian ಎಂಬ **ಪದಬಳಕೆ ಮಾಡಕೊಡದೆಂದು** ಆದೇಶಿಸಲಾಗಿದೆ.
2. ಯಾವುದೇ ಮಹಾವಿದ್ಯಾಲಯವು **ಪ್ರಸಕ್ತ (2026–27) ಸಾಲಿನಲ್ಲಿ** Defined Parameters ನ 8 ಅಂಶಗಳನ್ನು ಪೂರ್ಣಗೊಳಿಸುದೇ ಇದ್ದಲ್ಲಿ **ಅಂತಹ ಮಹಾವಿದ್ಯಾಲಯಗಳಿಗೆ** ಎರಡು ವರ್ಷದಲ್ಲಿ Defined Parameters ಗಳನ್ನು ಪೂರ್ಣಗೊಳಿಸುವ **ಷರತ್ತಿನೊಂದಿಗೆ ಸಂಲಗ್ನತೆ ಮುಂದುವರಿಕೆ** ನೀಡಲಾಗಿದೆ.
3. ಯಾವುದೇ ಮಹಾವಿದ್ಯಾಲಯವು **ಎರಡು ವರ್ಷದಲ್ಲಿ Defined Parameters** ಪ್ರಕಾರ ಕನಿಷ್ಠ 40 ಸಂಯೋಜನಾ ಅಂಕಗಳನ್ನು **ಗಳಿಸದೇ ಇದ್ದಲ್ಲಿ, ಅಂತಹ ಮಹಾವಿದ್ಯಾಲಯದಲ್ಲಿ ಪ್ರಥಮ** ವರ್ಷದ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ನಿಷಿದ್ದಗೊಳಿಸಲಾಗುವುದು **ಮತ್ತು ದ್ವಿತೀಯ ಮತ್ತು ತೃತೀಯ ವರ್ಷದ** ಪದವಿ/ದ್ವಿತಿಯ ವರ್ಷ ಸ್ನಾತಕೋತ್ತರ ತರಗತಿಯನ್ನು ಪೂರ್ಣಗೊಳಿಸುವವರೆಗೆ **ಮಾತ್ರ ಕಾಲೇಜು ನಡೆಸಲು ಅವಕಾಶ ಕಲ್ಪಿಸಿ, ನಂತರ** ಕಾಲೇಜಿನ ಸಂಲಗ್ನತೆ ರದ್ದುಪಡಿಸಲಾಗುವುದು.
4. ಪತ್ರ ವ್ಯವಹಾರಕ್ಕೆ **ಸಂಪೂರ್ಣ ಖಾಯಂ ವಿಳಾಸ ನೀಡತಕ್ಕದ್ದು. ಕಾಲೇಜು/ಸಂಸ್ಥೆ** ನೀಡಿದ ವಿಳಾಸದ ಮೇಲೆ ಪತ್ರ ವ್ಯವಹಾರ ಮಾಡಿದಾಗ ತಲುಪದೇ ಇದ್ದಲ್ಲಿ **ವಿಶ್ವವಿದ್ಯಾಲಯವು** ಜವಾಬ್ದಾರವಿಲ್ಲವೆಂದು ತಿಳಿಸಲಾಗಿದೆ.
5. ಆನ್‌ಲೈನ್ ಅರ್ಜಿಯನ್ನು **ಸಲ್ಲಿಸುವಾಗ ಗಮನಿಸಬೇಕಾದ** ಅಂಶಗಳನ್ನು ಪಾಲಿಸಬೇಕಾದ ಷರತ್ತುಗಳನ್ನು ಹಾಗೂ ಲಗತ್ತಿಸಬೇಕಾದ ದಾಖಲಾತಿ**ಗಳು ಹಾಗೂ ಶುಲ್ಕದ ಬಗ್ಗಿನ ವಿವರಗಳನ್ನು** ಲಗತ್ತಿಸಿ ನಿಖರವಾಗಿ ನಮೂದಿಸಬೇಕು. ಆನ್‌ಲೈನ್ ರಸೀದಿಯ ಹಿಂಭಾಗದಲ್ಲಿ **ಕಾಲೇಜಿನ ಮೊಹರು ಮುದ್ರಿಸಿ ಯಾವ ಕಾರಣಕ್ಕಾಗಿ** ಸಲ್ಲಿಸಲಾಗಿದೆ, ಎಂಬುದನ್ನು ನಮೂದಿಸಿ ವಿಶ್ವವಿದ್ಯಾಲಯಕ್ಕೆ ಪ್ರಾಂಶುಪಾಲರು **ದೃಢೀಕರಿಸಿ ಸಲ್ಲಿಸಬೇಕು. ಕಡ್ಡಾಯವಾಗಿ** ಪಾಲಿಸಬೇಕಾದ ಸೂಚನೆಗಳನ್ನು ಹಾಗೂ ಶುಲ್ಕದ ವಿವರಗಳನ್ನು ಅನುಬಂಧದ**ಲ್ಲಿ ನೀಡಲಾಗಿದೆ.**

6. ವಿಶ್ವವಿದ್ಯಾಲಯದ ಅಧಿಸೂಚನೆಯಂತೆ ಅಪೂರ್ಣವಾದ ಅರ್ಜಿಗಳನ್ನು (ವಿವರ, ಶುಲ್ಕ, ದಾಖಲಾತಿಗಳು ಇತ್ಯಾದಿ) ತಿರಸ್ಕರಿಸಲಾಗುವುದು.
7. ಸಂಲಗ್ನತೆ ಮುಂದುವರಿಕೆ ಪ್ರಸ್ತಾವನೆ ಸಲ್ಲಿಸುವ ಕಾಲೇಜುಗಳು ಕಡ್ಡಾಯವಾಗಿ AISHE-DCF-II ಅಪಲೋಡ್ ಮಾಡಿರಬೇಕು. AISHE-DCF-II ಅಪಲೋಡ್ ಮಾಡದ ಕಾಲೇಜುಗಳ ಪ್ರಸ್ತಾವನೆಯನ್ನು ಪರಿಗಣಿಸಲಾಗುವದಿಲ್ಲ.
8. ಹೊಸ ಮಹಾವಿದ್ಯಾಲಯದ ಸಂಲಗ್ನತೆ ಕೋರಿ ಪ್ರಸ್ತಾವನೆ ಸಲ್ಲಿಸುವ ಪ್ರಾಂಶುಪಾಲರು /ಸಂಘ/ಸಂಸ್ಥೆಗಳು ವಿಶ್ವವಿದ್ಯಾಲಯವು ಕಾಲೇಜಿನ ಕಟ್ಟಡದ ಸುರಕ್ಷತೆ ಕುರಿತು ಹೊರಡಿಸಿರುವ ಸುತ್ತೋಲೆ (ಸಂಖ್ಯೆ ಸಂ. ಗುವಿಕ/ವಿಮವಿ/ಸಂಲಗ್ನತೆ/2020–21/402 ದಿನಾಂಕ: 14.09.2021) ಯಂತೆ National Building Code of India ದ ಸುರಕ್ಷಾ ಹಾಗೂ Fire Safety ಮಾನದಂಡಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
9. ಎಲ್ಲಾ ಸಂಘ/ಸಂಸ್ಥೆ/ಪ್ರಾಂಶುಪಾಲರುಗಳು ಸಲ್ಲಿಸುವ ಪ್ರಸ್ತಾವನೆಗಳನ್ನು ಸರಕಾರವು ಹೊರಡಿಸಿದ ಆದೇಶ ಸಂಖ್ಯೆ ಇಡಿ29 ಯು.ಎನ್.ಇ 2021 ದಿನಾಂಕ 12.02.2021 ಹಾಗೂ ದಿನಾಂಕ 16.02.2021 ಗಳಂತೆ ಮಹಾವಿದ್ಯಾಲಯಗಳು ಪಡೆಯುವ Affiliation score ಗಳಿಗೆ ಕಡ್ಡಾಯವಾಗಿ ಒಳಪಟ್ಟಿರುತ್ತವೆ.
10. ಗುಲಬರ್ಗಾ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಎಲ್ಲಾ ಮಹಾವಿದ್ಯಾಲಯಗಳು ಕಡ್ಡಾಯವಾಗಿ ಇಂಟರನೆಟ್ ಮತ್ತು ವೆಬ್‌ಸೈಟ್ ಸೌಲಭ್ಯ (Internet & website facility) ಹೊಂದಿರತಕ್ಕದ್ದು. 2023–24ನೇ ಸಾಲಿನಲ್ಲಿ ಆಯಾ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳ ಅರ್ಹತಾ ಪಟ್ಟಿಯನ್ನು ಇಂಟರನೆಟ್/ವೆಬ್‌ಸೈಟ್ ಮುಖಾಂತರವೇ ಪಡೆಯಲು ಮಾತ್ರ ಅವಕಾಶ ವಿದೆ. ಕಾರಣ ಇಂಟರನೆಟ್ ಮತ್ತು ವೆಬ್‌ಸೈಟ್ ವಿವರ ನಮೂದಿಸತಕ್ಕದ್ದು.
11. ಯಾವುದೇ ಸಂಸ್ಥೆಯವರು ಸಂಲಗ್ನತೆಗಾಗಿ ಪಾವತಿ ಮಾಡಿದ ಶುಲ್ಕವನ್ನು ಯಾವ ಕಾರಣಕ್ಕೂ ಮರುಸಂದಾಯ ಅಥವಾ ಮುಂದಿನ ವರ್ಷಕ್ಕೆ ಹೊಂದಾಣಿಕೆ ಮಾಡಲು ಬರುವದಿಲ್ಲವೆಂದು ತಿಳಿಸಲಾಗಿದೆ. ಈ ವರ್ಷದಲ್ಲಿ ಯಾವ ತರಹದ ಪತ್ರವ್ಯವಹಾರ ಮಾಡಲಾಗುವುದಿಲ್ಲ.
12. ಸರಕಾರದ ಪತ್ರ ಸಂಖ್ಯೆ ಇಡಿ/384/ಯುಎನ್‌ಇ/2020 ದಿನಾಂಕ: 30.12.2020 ರನ್ವಯ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಸರಕಾರಿ ಮಹಾವಿದ್ಯಾಲಯಗಳ ಪ್ರಾಂಶುಪಾಲರು ತಮ್ಮ ಕಾಲೇಜಿನಲ್ಲಿ ಹೊಸ ಸ್ನಾತಕ/ಸ್ನಾತಕೋತ್ತರ ಕೋರ್ಸು/ಹೊಸ ವಿಷಯ/ ವಿದ್ಯಾರ್ಥಿ ಪ್ರಮಾಣ ಹೆಚ್ಚಳದ ಕುರಿತು ಪ್ರಸ್ತಾವನೆಯನ್ನು ಸಲ್ಲಿಸುವ ಮೊದಲು ಕಾಲೇಜು ಶಿಕ್ಷಣ ಇಲಾಖೆಯ ಆಯಕ್ತರಿಂದ ಅನುಮೋದನೆ ಪಡೆದು ಅವರ ಸ್ಪಷ್ಟ ಶಿಫಾರಸ್ಸಿನೊಂದಿಗೆ ಮಾತ್ರ ಪ್ರಸ್ತಾವನೆ ಸಲ್ಲಿಸುವುದು.
13. ಗುಲಬರ್ಗಾ ವಿಶ್ವವಿದ್ಯಾಲಯ ಏರ್ಪಡಿಸುವ ಎಲ್ಲಾ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ಎಲ್ಲಾ ಮಹಾವಿದ್ಯಾಲಯಗಳು ಕಡ್ಡಾಯವಾಗಿ ಭಾಗವಹಿಸಬೇಕು ಮತ್ತು ಆಯಾ ಶೈಕ್ಷಣಿಕ ವರ್ಷದಲ್ಲಿ ಒಂದಾದರೂ ಸಾಂಸ್ಕೃತಿಕ/ಕ್ರೀಡಾ ಚಟುವಟಿಕೆ ಏರ್ಪಡಿಸುವಂತೆ ಪ್ರಾಂಶುಪಾಲರಿಗೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.
14. ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಸಂಬಂಧಿಸಿದ ಪದವಿ ಕೋರ್ಸುಗಳನ್ನು ನೆಡಸಿರಬೇಕು. ಪದವಿ ಕೋರ್ಸುಗಳ ಇರುವ ಸ್ಥಳದಲ್ಲಿಯೇ ಸ್ನಾತಕೋತ್ತರ ಕೋರ್ಸುಗಳನ್ನು ನಡೆಸಬೇಕು.
15. ಸಂಲಗ್ನತೆಯ ಅರ್ಜಿಸಲ್ಲಿಸುವಾಗ, ಸರಕಾರದ ಆದೇಶ ಪತ್ರದನ್ವಯ (ಸಂಖ್ಯೆ: ಇಡಿ/34/ಇಜಿಒವಿ/2020 (ಭಾಗ–2) ದಿನಾಂಕ: 26.04.2022) ನಿಗದಿತ ಎಲ್ಲಾ ಮಾನದಂಡಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಸದರಿ ಆದೇಶ ಪತ್ರ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ನೋಡಬಹುದಾಗಿದೆ.
16. ಸಂಘಗಳು, ಸಂಸ್ಥೆಗಳು, ರಜಿಸ್ಟರ್ಡ ಟ್ರಸ್ಟ ತಮ್ಮ ಹೊಸ ಕಾಲೇಜಿನ ಸಂಲಗ್ನತೆಯ ಅರ್ಜಿಯೊಂದಿಗೆ ಕೆಳಕಂಡ ದಾಖಲೆಗಳನ್ನು ಕಡ್ಡಾಯವಾಗಿ ಲಗತ್ತಿಸಬೇಕು (01–11).

1. Copy of the **Registration Certificate of the Education Society**.
2. Copy of the **Memorandum of Articles of Association,** Rule, Regulations and Bye-law.
3. If it is a Trust, **a Copy of the Trust Deed and evidence** for having registered the same as per rules.
4. Latest **Audit Report of the Education Society/Trust.**
5. Audit **Report of the College.**
6. Annual **Report of the Previous Year**.
7. Place in **which proposed college is to be located and its suitability** (enclose building plan etc).

8. In the case of SC/ST Management, a certificate issued by the competent authority should be enclosed.
9. An undertaking in Rs.100/-stamp paper duly certified by the notary should be given as in "Part-C" which is stating that the college will comply with all provisions of the Act, Statutes, Regulations, Ordinance, guidelines issued from time to time etc.
10. Building Safety Certificate.
11. Fire Safety Certificate.

ಸಿಂಡೀಕೇಟ್ ಸಭೆಯ ಸಂಖ್ಯೆ 09 ದಿನಾಂಕ:27.10.1986 ರ ನಿರ್ಣಯದ ಮೇರೆಗೆ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದ ಸಂಸ್ಥೆಗಳು ಹಾಗೂ ಕಾಲೇಜುಗಳು ಮೇಲೆ ನಮೂದಿಸಿದ ಸಂಲಗ್ನತೆ ಶುಲ್ಕದ ಶೇಕಡ 50 ರಷ್ಟು ಶುಲ್ಕ ಮಾತ್ರ ಪಾವತಿ ಮಾಡಬೇಕು.

ಟಿಪ್ಪಣಿ:

1. ಹೊಸ ಸಂಲಗ್ನತೆ ಎಂದರೆ **2027–28 ನೇ ಶೈಕಣಿಕ ಸಾಲಿನಿಂದ** ಹೊಸ ಮಹಾವಿದ್ಯಾಲಯ ಪ್ರಾರಂಭಿಸಲು ಅಥವಾ ಚಾಲ್ತಿಯಲ್ಲಿರುವ **ಮಹಾವಿದ್ಯಾಲಯಗಳಿಗೆ ಮೊದಲನೆ** ವರ್ಷದಿಂದ ಹೊಸ ಕೋರ್ಸ/ವಿಷಯ ಪ್ರಾರಂಭಿಸಲು ಕೇಳುವ **ಪ್ರಸ್ತಾವನೆ.**
2. ಮುಂದುವರಿಕೆ ಸಂಲಗ್ನತೆ **ಎಂದರೆ ಚಾಲ್ತಿಯಲ್ಲಿರುವ** ಮಹಾವಿದ್ಯಾಲಯಗಳಲ್ಲಿ ಚಾಲ್ತಿಯಲ್ಲಿರುವ ಕೋರ್ಸ ವಿಷಯಗಳನ್ನು ಮುಂದುವರಿಸಿಕೊಂಡು ಹೋಗಲು ಕೇಳುವ ಪ್ರಸ್ತಾವನೆ.
3. ಸಂಲಗ್ನತೆ ವಿಸ್ತರಣೆ **ಎಂದರೆ, 2025–26 ಹಾಗೂ 2026–27 ನೇ** ಸಾಲಿನಲ್ಲಿ ಹೊಸ ಸಂಲಗ್ನತೆ ಪಡೆದ ಮಹಾವಿದ್ಯಾಲಯಗಳು **2027–28 ನೇ ಸಾಲಿಗಾಗಿ ಆಯಾ ಕೋರ್ಸಿನ** ಮುಂದಿನ ತರಗತಿಗಳಿಗೆ ಸಂಲಗ್ನತೆ ವಿಸ್ತರಣೆಗೆ ಕೋರುವುದು ಹಾಗೂ **ನಿಗದಿಪಡಿಸಿದ ವಿಸ್ತರಣೆ ಶುಲ್ಕವನ್ನು ಕಡ್ಡಾಯವಾಗಿ** ಭರಿಸತಕ್ಕದು.
4. ಶಾಶ್ವತ ಸಂಲಗ್ನತೆ **ನವೀಕರಣ ಎಂದರೆ, ಈಗಾಗಲೇ ಶಾಶ್ವತ ಸಂಲಗ್ನತೆ** ಹೊಂದಿದ ಮಹಾವಿದ್ಯಾಲಯಗಳು ಪ್ರತಿ ಐದು ವರ್ಷಕ್ಕೆ ಒಂದು **ಬಾರಿ ತಾವು ಹೊಂದಿದ ಶಾಶ್ವತ ಸಂಲಗ್ನತೆಯನ್ನು** ಮುಂದಿನ ಐದು ವರ್ಷಕ್ಕೆ ನವೀಕರಿಸಿಕೊಳ್ಳಲು ಸಲ್ಲಿಸುವ ಪ್ರಸ್ತಾವನೆ.
5. ಕಾಲೇಜು **ಸ್ಥಳಾಂತರ ಅಥವಾ ಕಟ್ಟಡ ಬದಲಾವಣೆ, ವಿಳಾಸ ಬದಲಾವಣೆಗಾಗಿ** ಪ್ರಸ್ತಾವನೆ ಸಲ್ಲಿಸಿರುವ ಕಾಲೇಜುಗಳು ಹಳೆ ಕಟ್ಟಡದ **ಜೊತೆಗೆ ಹೊಸದಾಗಿ ಪ್ರಸಾಪಿತ ಕಾಲೇಜಿನ ಸ್ಥಳ ಪರಿಶೀಲನೆಗೆ ಒಳಪಡಿಸತಕ್ಕದ್ದು,** LIC ಸಮಿತಿ ಶಿಫಾರಸ್ಸು ಮಾಡಿದ **ನಂತರ, ಸರ್ಕಾರದ ಪರವಾನಗಿ ದೊರೆತ ನಂತರವೇ ಹೊಸ** ಸ್ಥಳ/ಕಟ್ಟಡ/ವಿಳಾಸಕ್ಕೆ ಕಾಲೇಜನ್ನು ಬದಲಾಯಿಸತಕ್ಕದ್ದು, **ಸರ್ಕಾರದ ಅನುಮತಿ ಇಲ್ಲದೆ ಯಾವುದೇ ಕಾಲೇಜು ಸ್ಥಳಾಂತರಕ್ಕೆ** ಅವಕಾಶವಿರುವುದಿಲ್ಲ.

29/10

ಕುಲಸಚಿವರು

ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ
ಸಂಯೋಜನೆ ಶುಲ್ಕದ ವಿವರಗಳು

ಕ್ರ. ಸಂ.	ಕೋರ್ಸು	ಶಾಶ್ವತ ಸಂಲಗ್ನತೆ ಮಂಜೂರಾತಿಗೆ ಕೋರ್ಸು ಶುಲ್ಕ ರೂ. (FPA)	ಹೊಸ ಸಂಲಗ್ನತೆ ಮಂಜೂರಾತಿಗೆ ಕೋರ್ಸು ಶುಲ್ಕ ರೂ. (NC)	ಮುಂದುವರಿಕೆ ಸಂಲಗ್ನತೆ ಶುಲ್ಕ			
				ವಾರ್ಷಿಕ ಮುಂದಿವರಿಕೆ ಶುಲ್ಕ ರೂ. (CTA)	ಪ್ರವೇಶ ಸಂಖ್ಯೆ ಹೆಚ್ಚಳ ಶುಲ್ಕ ರೂ. (SII)	ವಿಸ್ತರಣೆ ಶುಲ್ಕ ರೂ. (ETA)	5 ವರ್ಷಕ್ಕೊಮ್ಮೆ ತನಿಖೆ ಮಾಡಲು (ಶಾಶ್ವತ ಸಂಯೋಜನೆ ಪಡೆದ ಮಹಾವಿದ್ಯಾಲಯಗಳಿಗೆ) (RPA)
01.	ಕಲಾ(ಆರ್ಟ್ಸ್)	9,1872	1,24,186	34,584	19,140	19,140	1,14,840
02.	ವಿಜ್ಞಾನ	9,1872	1,92,931	34,584	19,140	19,140	1,14,840
03.	ವಾಣಿಜ್ಯ	1,26456	1,24,186	34,584	19,140	19,140	1,14,840
04.	ಚಿತ್ರಕಲಾ	91,740	2,06,870	34,584	19,140	19,140	1,14,840
05.	ಬಿ.ಬಿ.ಎ	3,11,168	2,40,240	50,050	25,025	25,025	1,24,410
06.	ಬಿ.ಸಿ.ಎ	98,527	3,43,200	50,050	25,025	25,025	1,24,410
07.	ಬಿ.ಎಸ್.ಡಬ್ಲ್ಯೂ	99,528	2,74,560	50,050	25,025	25,025	1,24,410
08.	ಬಿ.ಎಡ್	8,65,150	–	1,73,030	–	–	8,65,150
09.	ಬಿ.ಪಿ.ಎಡ್	–	–	1,73,030	–	–	8,65,150
10.	ಐ.ಟಿ.ಇ.ಪಿ (B Sc B.Ed ITEP Secondary Stage)	8,65,150	6,19,978	2,50,000	1,75,000	2,00,000	8,65,150
11.	ಐ.ಟಿ.ಇ.ಪಿ (BA B.Ed ITEP Secondary Stage)	8,65,150	6,19,978	2,50,000	1,75,000	2,00,000	8,65,150
	ಸ್ನಾತಕೋತ್ತರ ಕೋರ್ಸುಗಳು						
01.	ಎಂ.ಎ. ಕನ್ನಡ		401,544	20,592	15,840	15,840	
02.	ಎಂ.ಎ.ಇಂಗ್ಲೀಷ		401,544	20,592	15,840	15,840	
03.	ಎಂ.ಎ. ಹಿಂದಿ		401,544	20,592	15,840	15,840	
04	ಎಂ.ಎ.ಉರ್ದು		401,544	20,592	15,840	15,840	
05.	ಎಂ.ಎ.ಸಂಸ್ಕೃತ		401,544	20,592	15,840	15,840	
06.	ಎಂ.ಎ. ಮರಾಠಿ		401,544	20,592	15,840	15,840	
07.	ಎಂ.ಎ. ಫಾಯಿನ ಆರ್ಟ್		401,544	22,968	22,968	31,284	1,59,420
08.	ಎಂ.ಎ. ದೃಶ್ಯಕಲೆ		401,544	22,968	22,968	31,284	1,59,420
09.	ಎಂ.ಎ. ಮ್ಯೂಜಿಕ್(ಸಂಗೀತ ಕಲೆ)		401,544	22,968	22,968	31,284	
10.	ಎಂ.ಎ. ಸಮಾಜಶಾಸ್ತ್ರ		401,544	22,968	15,840	15,840	
11.	ಎಂ.ಎ. ಅರ್ಥಶಾಸ್ತ್ರ		401,544	22,968	15,840	15,840	
12.	ಎಂ.ಎ. ರಾಜ್ಯಶಾಸ್ತ್ರ		401,544	22,968	15,840	15,840	
13.	ಎಂ.ಎ. ಇತಿಹಾಸ		401,544	22,968	15,840	15,840	
14.	ವುಮನ್ಸ ಸ್ಟಡೀಜ		401,544	22,968	15,840	15,840	
15.	ಮನೋವಿಜ್ಞಾನ		401,544	22,968	15,840	15,840	
16.	ಲೈಬ್ರರಿ ಆ್ಯಂಡ ಇನ್‌ಫಾರಮೇಶನ ಸೈನ್ಸ್ (ಎಂ.ಎಲ್.ಐ.ಎಸ್‌ಸಿ)		401,544	22,968	15,840	15,840	
17.	ಎಂ.ಜೆ.ಎಂ.ಸಿ (ಮಾಸ್ಟರ್ ಆಫ್ ಜರ್ನಾಲಿಜ್ಂ ಆ್ಯಂಡ್ ಮಾಸ್		5,16,648	22,968	15,840	31,416	

	ಕಮ್ಯುನಿಕೇಶನ್)						
18	ಎಂ.ಎಸ್.ಡಬ್ಲ್ಯೂ		5,16,648	2,18,933	92,235	92,235	
19.	ಎಂ.ಎಸ್ಸಿ ರಸಾಯನಶಾಸ್ತ್ರ		5,16,648	1,37,808	52,008	52,008	
20.	ಎಂ.ಎಸ್ಸಿ. ಸೂಕ್ಷ್ಮಜೀವಶಾಸ್ತ್ರ		5,16,648	1,37,808	52,008	52,008	
21.	ಎಂ.ಎಸ್ಸಿ. ಭೌತಶಾಸ್ತ್ರ		5,16,648	1,37,808	52,008	52,008	
22.	ಎಂ.ಎಸ್ಸಿ. ಅಪ್ಲೈಡ್ ಎಲೆಕ್ಟ್ರಾನಿಕ್ಸ		5,16,648	1,37,808	52,008	52,008	
23.	ಎಂ.ಎಸ್ಸಿ. ಬಯೊಕೆಮಿಸ್ಟ್ರಿ		5,16,648	1,37,808	52,008	52,008	
24.	ಎಂ.ಎಸ್ಸಿ.ಬಯೋಟೆಕ್ನಾಲೋಜಿ		401,544	1,37,808	52,008	52,008	
25.	ಎಂ.ಎಸ್ಸಿ. ಸಸ್ಯಶಾಸ್ತ್ರ		401,544	1,37,808	52,008	52,008	
26.	ಎಂ.ಎಸ್ಸಿ.ಗಣಿತಶಾಸ್ತ್ರ		401,544	1,37,808	52,008	52,008	
27.	ಎಂ.ಎಸ್ಸಿ. ಸಂಖ್ಯಾಶಾಸ್ತ್ರ		401,544	1,37,808	52,008	52,008	
28.	ಎಂ.ಎಸ್ಸಿ. ಪ್ರಾಣಿಶಾಸ್ತ್ರ		401,544	1,37,808	52,008	52,008	
29.	ಗಣಿಕವಿಜ್ಞಾನ		401,544	1,25,268	52,008	52,008	
30.	ವಾಣಿಜ್ಯಶಾಸ್ತ್ರ		401,544	1,25,268	52,008	52,008	
31.	ಎಂ.ಎಫ್.ಎ		401,544	1,37,148	52,008	52,008	
32	ಎಂ.ಇಡ್		5,16,648	2,18,933	–	–	10,94,665

ಹೊಸ ಮಹಾವಿದ್ಯಾಲಯಕ್ಕಾಗಿ ಆನ್‌ಲೈನ್‌ನಲ್ಲಿ New College (N.C), ಮುಂದುವರಿಕೆ ಸಂಲಗ್ನತೆಗಾಗಿ Extension of Temporary Affiliation (ETA) ಆಯ್ಕೆಯನ್ನು ಮಾಡಿಕೊಳ್ಳುವುದು. ಅದೇರೀತಿ ಶಾಶ್ವತ ಸಂಲಗ್ನತೆ ನವೀಕರಣಕ್ಕಾಗಿ Renewal of Permanent Affiliation (RPA) ಆಯ್ಕೆ ಮಾಡಿಕೊಳ್ಳುವುದು.

ಅ		ಕೋರ್ಸ್ / Course	New Course	Continuation Affln.fees	Addl. Intake
		ವಾಣಿಜ್ಯ ನಿಕಾಯ (Commerce Faculty)			
	1.	ಟ್ಯಾಕ್ಸ ಮ್ಯಾನೇಜಮೆಂಟ (Tax Management)	1,78,596	34,320	17,028
	2.	ಕಂಪ್ಯೂಟರ್ ಪ್ರೋಗ್ರಾಮಿಂಗ ಆ್ಯಂಡ ಸಿಸ್ಟಮ್ ಅನಾಲೈಸಿಸ್ (Computer Programming & System Analysis)	1,78,596	34,584	17,028
	3.	ಹ್ಯೂಮನ ರಿಸೋರ್ಸ ಮ್ಯಾನೇಜಮೆಂಟ (Human Resource Mgmt)	1,78,596	34,584	17,028
ಬ		**ವಿಜ್ಞಾನ ನಿಕಾಯ (Science Faculty)**			
	1.	ಕಂಪ್ಯೂಟರ ಅಪ್ಲಿಕೇಷನ್ಸ (Computer Application)	1,78,596	34,584	17,028
	2.	ಹಾಸ್ಪಿಟಲ್ ಮ್ಯಾನೇಜಮೆಂಟ್ (Hospital Management)	1,78,596	34,584	17,028
ಕ		**ಸಮಾಜ ವಿಜ್ಞಾನ ನಿಕಾಯ (Social Science Faculty)**			
	1.	ಪಂಚಾಯತ್ ರಾಜ ಆ್ಯಂಡ ರೂರಲ್ ಡೆವಲಪಮೆಂಟ್ (Panchayata Raj and Rural Development)	81,048	34,584	17,028
	2.	ಜರ್ನಲಿಜಂ ಆ್ಯಂಡ ಮಾಸ್ ಕಮ್ಯುನಿಕೇಶನ (Journalism and mass Communation)	81,048	34,584	17,028
	3.	ಡಾ. ಬಿ.ಆರ್ ಅಂಬೇಡ್ಕರ ಸ್ಟಡೀಜ್ (Dr. B.R Ambedkar Studies)	81,048	34,584	17,028
ಡ.		**ಕಲಾ ನಿಕಾಯ (Arts Faculty)**			
	1.	ಟ್ರಾನ್ಸಲೇಶನ, ಸ್ಕಿಲ್ (Translation Skill)	81,048	34,320	17,028
	2.	ವಚನ ಸಾಹಿತ್ಯ(Vachana Sahitya)	81,048	34,320	17,028
	3.	ದಾಸ ಸಾಹಿತ್ಯ (Dasa sahitya)	81,048	34,320	17,028
	4.	ನಾಟಕ ಸಾಹಿತ್ಯ & ರಂಗಭೂಮಿ (Nataka Sahitya & Rangbhoomi)	81,048	34,320	17,028
	5.	ಯೋಗಾ (Yoga)	81,048	34,320	17,028

ಕ್ರ. ಸಂ.	ಇತರೆ ಶುಲ್ಕಗಳು	ರೂ
1.	ಹೊಸ ವಿಷಯ ಶುಲ್ಕ	11,000/–
2.	ಮರು ತನಿಖಾ ಶುಲ್ಕ	42,000/–
3.	ಕಾಲೇಜು ಸ್ಥಳಾಂತರಿಸುವ ಶುಲ್ಕ (ಸ್ಥಳೀಯವಾಗಿ) (ಟಿಪ್ಪಣಿಯ ಕ್ರ. ಸಂ. 5 ನ್ನು ಗಮನಿಸುವುದು) (ಬೇರೆ ನಗರ/ ಪಟ್ಟಣ)	38,000/– 75,000/–
4.	ಮಹಾವಿದ್ಯಾಲಯಗಳ ಹೆಸರು ಬದಲಾವಣೆ	30,000/–
5.	ಪ್ರತಿ ವಿಷಯಕ್ಕೆ ವಿಸ್ತರಣೆ ಶುಲ್ಕ ವೃತ್ತಿಪರ ಮಹಾವಿದ್ಯಾಲಯಗಳಿಗೆ	25,000/–
6.	ಪ್ರತಿ ಕೋರ್ಸು ವಿಸ್ತರಣೆ ಶುಲ್ಕ ಇತರ ಮಹಾವಿದ್ಯಾಲಯಗಳಿಗೆ	16,000/–
7.	ಒಂದು ಸಂಸ್ಥೆಯಿಂದ ಮತ್ತೊಂದು ಸಂಸ್ಥೆಗೆ ಮಹಾವಿದ್ಯಾಲಯಗಳ ವರ್ಗಾವಣೆ ಶುಲ್ಕ: 1. ವರ್ಗಾವಣೆ ಮಾಡುವ ಸಂಸ್ಥೆಗೆ : 2. ಪಡೆದುಕೊಳ್ಳುವ ಸಂಸ್ಥೆಗೆ :	 95.000/– 95.000/–
9.	ಕಾಲೇಜು ಮುಚ್ಚುವಿಕೆ (Closer of College)	98,000/–
10	ಕೋರ್ಸು ಮುಚ್ಚುವಿಕೆ (Closer of Course)	98,000/–
11	ವಿಷಯ ಮುಚ್ಚುವಿಕೆ (Closer of Subject)	11,000/–

29/10

ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಗೆ,

ಗುಲಬರ್ಗಾ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಮಹಾವಿದ್ಯಾಲಯಗಳ ಪ್ರಾಂಶುಪಾಲರ ಮಾಹಿತಿಗಾಗಿ.

ಪ್ರತಿಗಳು: 1. ಸರ್ಕಾರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರದ ಸಚಿವಾಲಯ, 5ನೇ ಮಹಡಿ, ಬಹುಮಹಡಿ ಕಟ್ಟಡ, ಡಾ. ಬಿ. ಆರ್. ಅಂಬೇಡ್ಕರ್ ವೀದಿ, ಬೆಂಗಳೂರು–560 001.

2. ಕುಲಸಚಿವರು (ಮೌಲ್ಯಮಾಪನ) ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

3. ಹಣಕಾಸು ಅಧಿಕಾರಿಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

4. UUCMS ನೋಡಲ್ ಅಧಿಕಾರಿಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ, ಇವರ ಮಾಹಿತಿಗಾಗಿ.

5. ಮುಖ್ಯಸ್ಥರು ಗಣಕಕೇಂದ್ರ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ. ಇವರಿಗೆ ಈ ಅಧಿಸೂಚನೆಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.

6. ಕುಲಸಚಿವರು/ಕುಲಪತಿಗಳು ಆಪ್ತ ಕಾರ್ಯಲಯ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

7. ಕಛೇರಿ ಕಡತಕ್ಕೆ.